ದೇವರಾಜ.

ಪ್ರಿನ್ಸಿಪಾಲರ ಕೋಣೆಯೊಳಗೆ ದೇವರಾಜ ಪ್ರವೇಶಿಸಿದಾಗ ಆಕೆ ಕಣ್ಣು ಕೆಂಪಗೆ ಮಾಡಿಕೊಂಡು ಒಂದು ಬದಿಯಲ್ಲಿ ನಿಂತಿದ್ದಳು. ಬಿಳಿಯ ಹಾಳೆಯಲ್ಲಿ ಏನೋ ಬರೆದಿಟ್ಟುಕೊಂಡು ಪ್ರಿನ್ಸಿಪಾಲರಿಗೆ ಕೊಡುತ್ತಿದ್ದಳು. ದೇವರಾಜ ಕರಗಿ ಹೋದ. ಶುದ್ಧ ಬಯಲುಸೀಮೆಯ ಭಾಷೆಯಲ್ಲಿ, "ದೇವ್ರಾಣೆ ನನ್ದೇನೂ ತಪ್ಪಿಲ್ಲ ಸಾರ್... ಸೈಕಲ್ ಸರ್‍ಯಾಗಿ ಹೊಡೆಯೋಕೆ ಬರೋಲ್ಲ. ಸ್ಕಿಡ್ ಆಗಿ ಬಿದ್ದುಬಿಟ್ಟೆ. ಬಸ್ ಜೋರಾಗಿ ಬಂತು. ಬೇಕೂಂತ ಡಿಕ್ಕಿ ಹೊಡೀಲಿಲ್ಲ ಸಾರ್."

ಪ್ರಿನ್ಸಿಪಾಲರು ಕಟುವಾಗಿ ಅಂದರು: "ಯಾವ ಊರು ನಿನ್ದು?"

"ಮಂಡ್ಯದ ಹತ್ರ ಹಳ್ಳೀ ಸಾರ್."

"ನಿಮ್ಮ ಮಂಡ್ಯದ ವರಸೆ ಇಲ್ಲಿಯೂ ತೆಗೆಯೋದಾ? ಬಂದು ತಿಂಗಳಾಗಿರಲಿಕ್ಕಿಲ್ಲ. ಆಗಲೇ ಹುಡುಗೀರನ್ನು ರೇಗಿಸುವುದಾ? ಹೋಗು. ನಿನ್ನ ಪೇರೆಂಟ್ಸ್ ಕರೆದು ತಾ. ಅವರು ಬರುವವರೆಗೆ ಕಾಲೇಜಿಗೆ ಬರಕೂಡದು. ತಿಳೀತೇನು?"

"ಸಾರ್..."

"ಎಂಥದು ಸಾರ್? ಹೇಳಿದರೆ ತಿಳಿಯಿತಿಲ್ಲೋ. ದೂರದಿಂದ ಬಂದ ಹುಡುಗ ಅಂತ ಸೀಟು ಕೊಟ್ಟರೆ ಎಲ್ಲಿ ಹೋಗುತ್ತೆ ನಿಮ್ಮ ಸ್ವಂತದ ಬುದ್ಧಿ? ನನಗೆ ಗೊತ್ತು... ನಾನು ಕೇಳೀ ಉಂಟು... ನಿಮ್ಮ ಮಂಡ್ಯದ ಹುಡುಗರ ಬಗ್ಗೆ... ಯೂ ಕೆನ್ ಗೋ ನೌ..., ನೀ ಹೋಗಮ್ಮ, ಅವನಿಗೆ ಬುದ್ಧಿ ಕಲಿಸ್ತೇನೆ."

...ಹುಡುಗಿ ದುರುದುರು ನೋಡಿ ಹೊರಗೆ ನಡೆದಳು. ದೇವರಾಜ ಮುಖ ಸಪ್ಪಗೆ ಮಾಡಿಕೊಂಡು ಮನೆಗೆ ಬಂದ. ಆ ಹುಡುಗಿಯ ಮೇಲೆ ವಿಪರೀತ ಸಿಟ್ಟು ಬಂತು. ಕ್ಷಮೆ ಕೇಳಿದರೂ ಕಂಪ್ಲೇಂಟ್ ಕೊಟ್ಟಿದ್ದಾಳೆ. ಮನುಷ್ಯತ್ವ ಇಲ್ಲ. ಹೃದಯ ಇಲ್ಲ. ಮಹಾ ಚೆಲುವೆ ಅಂತ ಕೊಬ್ಬು. ನಾನೇನು ಬೇಕೂಂತ ಬಿದ್ನಾ?

★★★

"ಇದೇನಪ್ಪಾ ನಿಂದು ಫಜೀತಿ? ಇಲ್ಲಿ ಅಭ್ಯಾಸವಿಲ್ಲದೆ ನಡೆಯೋದೇ ಕಷ್ಟ. ಅಂಥದ್ದರಲ್ಲಿ ಸೈಕಲ್ ಹೊಡೆಯೋಕೆ ಯಾಕೆ ಹೋದೆ? ನಡಿ. ನಿಮ್ಮ ಪ್ರಿನ್ಸಿಪಾಲರ ಹತ್ತಿರ ಹೇಳ್ತೀನಿ. ಆದದ್ದಾಯಿತು" ಅಂತ ಭಾವ ಹೊರಟು ನಿಂತಾಗ ದೇವರಾಜ ಮೊಂಡಾಟ ಮಾಡಿದ. "ಬೇಡ ಭಾವ, ನಾನು ಊರಿಗೆ ಹೋಗ್ತೀನಿ. ನನಗೆ ಕಾಲೇಜಿನಲ್ಲಿ ತುಂಬಾ ಅವಮಾನ ಆಗೈತೆ. ಎಲ್ಲ ಒಂಥರಾ ನೋಡ್ತಾರೆ. ನನ್ನ ಟೀಸಿ ಈಸ್ಕೊಂತಿನಿ".

"ಸರಿ ಹೋಯ್ತು. ಇಷ್ಟಕ್ಕೆಲ್ಲಾ ಟೀಸೀನಾ? ಬಾ ಬಾ" ಅಂತ ಭಾವ ಪ್ರಿನ್ಸಿಪಾಲರ ಕೋಣೆಗೆ ದೇವರಾಜನನ್ನು ಕರೆದುಕೊಂಡೇ ಬಂದರು. "ಕುಳಿತುಕೊಳ್ಳಿ" ಅಂದರು ಅವರು. "ವಿಷಯ ತಿಳೀತು. ಹುಡುಗ ಅಂಥವನಲ್ಲ. ಆತನಿಗೆ ವಂಚನೆ, ತುಂಟತನ ಏನೂ ತಿಳಿಯೋಲ್ಲ. ಪ್ಲೀಸ್ ಇದೊಂದು ಸಾರಿ ಅವನಿಗೆ ಕ್ಷಮೆ ನೀಡಿ. ಮತ್ತೆ ತಪ್ಪಾಗದ ಹಾಗೆ ನಾನು ಎಚ್ಚರ ವಹಿಸ್ತೀನಿ..." ಭಾವ ಈಗಾಗಲೇ ಕಾರವಾರದ ಜನರ ನಯ, ವಿನಯ, ನಾಜೂಕು ಕಲಿತಿದ್ದರು. ದೇವರಾಜ ತಲೆ ತಗ್ಗಿಸಿ ನಿಂತಿದ್ದ. ಪ್ರಿನ್ಸಿಪಾಲರಿಗೂ ಅಯ್ಯೋ ಅನ್ನಿಸಿರಬೇಕು. "ಒಂದು ನಿಮಿಷ ಇರಿ. ಆ ಹುಡ್ಗೀನ ಕರೆಸುತ್ತೇನೆ" ಅಂದರು. ಎರಡು ನಿಮಿಷದಲ್ಲಿ ಹುಡುಗಿ ಬಂದು, "ಸಾರ್?" ಎಂದಳು.